Mysore Office— Chamarajapuram
Bangalore Office— 9 Bull Temple Road, Basavangudi.

ವಾರದ ಸಂಚಿಕೆ

Reg No. M 1299 ) Daily & Weekly ( Founded 1917

# ಸತ್ಯವಾದಿ
SATYAVADI

ಸಂಪುಟ 27 ಸಂಚಿಕೆ 50 ] ಸೋಮವಾರ 22—11—43 [ ಅರ್ಧಾಣೆ

## ಈವಾರದ ಭವಿಷ್ಯ

ಕೃಷ್ಣಾಪುರದ ವೆಂಕಟನರಸಿಂಹಾಚಾರ್
ಶ್ರೀ ರಾಮಕೃಷ್ಣ ಜ್ಯೋತಿಷಾಲಯ

### ಮೇಷ

ಒಳ್ಳೇ ಅನುಕೂಲ ಕಾಲ. ಸುಖ ಸಂಪತ್ತು ದೊರೆಯುವುದು.

### ವೃಷಭ

ಊಟು ದನ ಕಾದು ದೊಡ್ಡ ಬೋದೇ ಗೌಡ ಎಂದು ಎನ್ನಿಸಿಕೊಳ್ಳಬೇಕೆಂಬ ಹಂಬಲ ಬಿಟ್ಟು ನಿಮ್ಮ ಕಾರ್ಯಗಳನ್ನು ನೋಡಿಕೊಂಡರೆ ಒಳ್ಳೇದು. ಈವಾರ ಜಾಗರೂಕತೆಯಿಂದಲೇ ವರ್ತಿಸಿ, ಅನುಕೂಲವಾಗಿಲ್ಲ.

### ಮಿಥುನ

ಸ್ಥಿತಿಗತಿಗಳು ಚೆನ್ನಾಗಿದೆ. ಆದರೂ ಏನೋ ಚಿಂತೆಪೀಡಿಸುತ್ತದೆ. ದುರಾಶೆ ಪಡಬೇಡಿ. ಹಿತ ಶತ್ರುಗಳ ವಿಷಯದಲ್ಲಿ ಹುಷಾರಾಗಿರಿ.

### ಕರ್ಕಾಟಕ

ಸ್ಥಿರ ಮನಸ್ಸಿನಿಂದ ಕೆಲಸಮಾಡಿ ಧನ ಧಾನ್ಯಕ್ಕೆ ಅತಂಕವಿಲ್ಲ.

### ಸಿಂಹ

ಯತ್ನ ಕಾರ್ಯ ಸಿದ್ಧಿಸಿ, ಮನಸ್ಸಿಗೆ ಹರ್ಷವಾಗುವುದು.

### ಕನ್ಯಾ

ಅನುಕೂಲಗಳು ಅಚ್ಚುಕಟ್ಟಾಗಿವೆ. ಸೆಚ್ಚು ಗಲಾಟೆಗಳಿಗೆ ಕೈಹಾಕಬೇಡಿ.

### ತುಲಾ

ಜಾಗರೂಕತೆಯಿಂದ ವರ್ತಿಸಿದರೆ ಎಲ್ಲಾ ನೆಟ್ಟಗಾಗುತ್ತದೆ.

### ವೃಶ್ಚಿಕ

ಕೆಲಸಕಾರ್ಯಗಳಲ್ಲಿ ಸ್ವಲ್ಪ ಕೆಡಕು. ಚಿಲ್ಲರೆಪಲ್ಲರೆ ಮನಸ್ತಾಪ.. ಶಾಂತತೆಯಿಂದ ವರ್ತಿಸಿ, ನವಗ್ರಹಾರಾಧನೆ ಮಾಡಿ ಶುಭ.

### ಧನು

ತಕ್ಕಮಟ್ಟಿಗೆ ಎಲ್ಲಾ ಅನುಕೂಲವಾಗಿದೆ.

### ಮಕರ

ಸ್ವಪರ ಜನರಲ್ಲಿ ಮಡ್ಡಣಿ. ಕೆಲಸ ಕಾರ್ಯಗಳಲ್ಲಿ ಫಾಯಿದೆ.

### ಕುಂಭ

ಸ್ವಲ್ಪ ಚಟುವಟಿಕೆಯಿಂದ ಕೆಲಸಮಾಡಿ. ನಿಮ್ಮ ಶ್ರಮವು ವ್ಯರ್ಥವಾಗುವುದಿಲ್ಲ.

### ಮೀನ

ಇಲ್ಲದ ತಾಪತ್ರಯ ನಿಮ್ಮನ್ನು ಆವರಿಸಿದೆ. ಖರ್ಚು ಜಾಸ್ತಿಯಾಗಿದೆ.

## ಯುದ್ಧವಾರ್ತೆ

ಬಾಲ್ಕನ್ ರಾಜ್ಯಗಳಲ್ಲಿ ದಿನದಿನಕ್ಕೆ ಅಶಾಂತತೆಯು ಹಚ್ಚುತ್ತಿದೆ. ಜರ್ಮನರಿಗೆ ಕಿರುಕುಳ ಕೊಡುತ್ತಿರುವರು.

ಂ ಂ

ವಿಸಫ್ರೋವನ್ನು ಜರ್ಮನರು ತ್ಯಜಿಸಿದರು.

ಂ ಂ

5 ಲಕ್ಷ ಬೆಲಜಿಯಂ ಯುವಕರನ್ನು ಜರ್ಮನಿಗೆ ಕೆಲಸಮಾಡಿಸಲು ಕರೆದುಕೊಂಡು ಹೋದರೆಂದು ಬೆಲಜಿಯಂ ರಾಜರಾದ ಲಿಯೋಪಾಲ್ಡ್ ಥೊರೆಗಳು ತಕರಾರು ಮಾಡಿರುತ್ತಾರೆ.

ಂ ಂ

ಚೀನದ ಯಾಂಗತ್ಸೀ ಪ್ರಾಂತದಲ್ಲಿ ಜಪಾನರ ಸೈನ್ಯವು ಪ್ರಗತಿಹೊಂದುತ್ತಲಿರುವದೆಂದು ಸುದ್ದಿಬಂದಿದೆ. ಕೆಲವು ಮುಖ್ಯ ಸ್ಥಳಗಳನ್ನು ಆಕ್ರಮಿಸಿದ್ದಾರೆ.

ಂ ಂ

ಭಾರತದಲ್ಲಿರುವ ಚೀನಿ ಸೇನೆಗಳು ಬರ್ಮಾರಸ್ತೆಯಲ್ಲಿ ಅಸ್ಸಾಂ ರಸ್ತೆಯಿಂದ ನುಗ್ಗಿ ಬರ್ಮಾದ 20–30 ಮೈಲಿಯಲಿ ಭೂಪ್ರದೇಶವನ್ನು ಆಕ್ರಮಿಸಿದರು.

ಇಟಲಿಯಲ್ಲಿ ನಾಜಿಗಳು ಅಮೇರಿಕ ಪಂಜನು ದಳದ ಭಾಗದಲ್ಲಿ ಭಯಂಕರ ಧಾಳಿ ಪ್ರಾರಂಭಿಸಿರುವರು.

ಂ ಂ

ತ್ರಿಂಕೊಮಲಿ ಮತ್ತು ಸಿಲೋನಿನಲ್ಲಿ ಬ್ರಿಟಿಷರು ದೊಡ್ಡ ಹಡಗು ಪಡೆ ಇಟ್ಟಿರುವ ಕಾರಣ ಬಂಗಾಳಾ ಸಮುದ್ರದಲ್ಲಿ ಶೀಘ್ರವಾಗಿ ಜರ್ಮನ್-ಬ್ರಿಟಿಷ್ ನೌಕಾಯುದ್ಧವು ಆಗಬಹುದೆಂದು ಅಂದಾಜು ಮಾಡಿದ್ದಾರೆ.

ಂ ಂ

ಟರ್ಕಿಯ ಹತ್ತಿರದ ದೊಡಕನೀಸ್ ದ್ವೀಪಕಲ್ಪದಲ್ಲಿಯ ಲೆರಸ್ ಎಂಬ ಬ್ರಿಟಿಷರ ವಶದಲ್ಲಿದ್ದ ದ್ವೀಪಕ್ಕೆ ಜರ್ಮರು ನುಗ್ಗಿರುವರು. ತೀವ್ರ ಕದನವಾಗುತ್ತಿದೆ.

ಂ ಂ

ಒರ್ಲಿಕ್ ಮೇಲೆ ಮತ್ತೆ ಧಾಳಿ ನಡೆಸಲಾಯಿತು- ಈ ಮೂರು ತಿಂಗಳಲ್ಲಿ 17 ಸಲ ಈ ರೀತಿ ಧಾಳಿ ನಡೆದಿದೆ.

ಂ ಂ

ಮಿತ್ರಸೇನೆಗಳು ಇಟಲಿಯಲ್ಲಿ ಮತ್ತೆ 5 ಮೈಲಿ ಮುಂದುವರಿದಿವೆ.

## ದೇಶವಿದೇಶ

ಐರ್ಲೆಂಡಿನ ರಿಪಬ್ಲಿಕ್ ಪ್ರೆಸಿಡೆಂಟರು ಮಿ|| ಡಿವೇಲರಾ ರವರು ಶಾಶ್ವತ ಕಡೆಯವರಿಗೂ ಯುದ್ಧ ವಿಷಯದಲ್ಲಿ ತಟಸ್ಥರಾಗಿರುತ್ತೇವೆಂದು ಹೇಳಿದರು.

ಂ ಂ

ರಷ್ಯನರು ಜರ್ಮನರನ್ನು ಎದುರಿಸಿ ಸ್ಟಾಲಿನ್‌ಗ್ರಾಡನ್ನು ಅವರಿಂದ ಮತ್ತೆ ಪಡೆದು 1 ವರ್ಷವಾಯಿತು. ಈಗಾಗಲೇ 10 ಸಾವಿರ ಹೊಸ ಮನೆಗಳನ್ನು ಕಟ್ಟಿರುತ್ತಾರೆ. 40 ಪಾಠಶಾಲೆಗಳಗಳನ್ನೂ, ಹೊಸದಾಗಿ ಸ್ಥಾಪಿಸಿರುವರು, ಪಟ್ಟಣದಲ್ಲಿ ಮುಂಚಿಗಿಂತ ಕೆಲಸಮಾಡುತ್ತಿರುವದು. ಇಲ್ಲಿ ತಯಾರಾಗುತ್ತಿರುವ ಮದ್ದು ಗುಂಡುಗಳನ್ನು ಜರ್ಮನರ ಮೇಲೆ ಪ್ರಯೋಗಿಸುತ್ತಲಿದ್ದಾರೆ.

ಂ ಂ

ಮಾರ್ಷಲ್ ಪೀಟ್‌ಇವರು ಹೃದಯ ವೇದನೆಯಿಂದ ಹಾಸಿಗೆಹತ್ತಿ ಮಲಗಿರುವನೆಂದೂ ಇವನು ಕೆಲಸಕ್ಕೆ ರಾಜೀನಾಮೆ ಕೊಟ್ಟಿರುವನೆಂದೂ ವದಂತಿ ಹಬ್ಬಿದೆ.

ಂ ಂ

ಕರಾಚಿ ಅಕ್ಕಿಯನ್ನು ಬೆಂಗಳೂರಿನಲ್ಲಿ ರೂಪಾಯಿಗೆ 3 ಸೇರಿನಂತೆ ಮಾರುತ್ತಿರುವರು.

ಂ ಂ

ಮುಂಬೈನಿಂದ ಭತ್ತ ಮತ್ತು ಅಕ್ಕಿಯನ್ನು ಒಂದು ಡಿಸ್ಟ್ರಿಕ್ಟಿನಿಂದ ಮತ್ತೊಂದು ಕಡೆಗೆ ಸರ್ಕಾರಿ ಅಪ್ಪಣೆಯಿಲ್ಲದೆ ಸಾಗಿಸಕೂಡದೆಂದು ಆಜ್ಞೆಯಾಗಿದೆ.

ಂ ಂ

ಬಂಗಾಳಾದ ನಿರ್ಗತಿಕರಿಗೆ ಒಟ್ಟೆ ದಾನಾ ಮಾಡಲು 60 ಲಕ್ಷ ರೂಪಾಯಿ ಮಂಜೂರಾಗಿದೆ.

ಂ ಂ

ದೆಹಲಿಯಲ್ಲಿ 20 ನೇ ತಾರೀಖಿನ ದಿವಸವೂ ವೈಸರಾಯರ ನೇತೃತ್ವದಲ್ಲಿ ವೈಸರಾಯಿ ಭವನದಲ್ಲಿ ಭಾರತದ ಎಲ್ಲಾ ಗೌರ್ನರರ ಸಭೆ ಸೇರಿದ್ದಿತು. ಯುದ್ಧ ಮುಗಿದನಂತರ ಯಾವ ರೀತಿ ದೇಶ ಪುನರ್ರಚನೆಗೆ ಮಾಡಬೇಕೆಂಬುದನ್ನು ದೀರ್ಘ ಚರ್ಚೆಮಾಡಿದರು.

ಉತ್ಕೃಷ್ಟವಾದ ಹಿಂಗು



ರಿಜಿಸ್ಟರ್ಡ್ ಟ್ರೇಡ್ ಮಾರ್ಕ್

ಊಟವು ರುಚಿಯಾಗಿದ್ದು ಸಂಪೂರ್ಣ ಆರೋಗ್ಯವೂ ಸೌಖ್ಯವೂ ದೊರೆಯಲು

T. G. ಮಾರ್ಕಿನ ಹಿಂಗನ್ನು

ಉಪಯೋಗಿಸಿ,

ಇದನ್ನು ನೀವು ಒಂದು ಸಾರಿ ಉಪಯೋಗಿಸಿದರೆ, ನಂತರ ಬೇರೆ ಯಾವುದನ್ನೂ ಉಪಯೋಗಿಸುವುದಿಲ್ಲ,

ಒಂದು, ಅರ್ಧ, ಕಾಲು ಪೌಂಡಿನ, ಒಂದು, ಸೇರು, ಒಂದು ಪಲಮ್ ಪ್ಯಾಕಿನಲ್ಲಿ ಎಲ್ಲಾ ಪ್ರಮುಖ ವ್ಯಾಪಾರಸ್ಥರಲ್ಲೂ ದೊರೆಯುತ್ತದೆ-

ನಮ್ಮ ಪರಿಮಳ ಆಡಿಕೆಪುಡಿಯು ಸುಪ್ರಸಿದ್ಧವಾದುದು,

ವಲ್ಲಭದಾಸ್ ತೇಜ್‌ಪಾಲ್
೧೪ ಗೋವಿಂದಪ್ಪನಾಯಕ್ ಸ್ಟ್ರೀಟ್, ಮದರಾಸು

# ಮುಗ್ಧ ಪತ್ನಿ

ಒಂದು ಕಥೆ

ಉಮಾಕಾಂತನು 18 ರೂಪಾಯಿಗಳ ಸಂಬಳದಲ್ಲಿ ನೇಗೋ ಸಂಸಾರ ಚಕ್ರವನ್ನು ನಡೆಸುತ್ತಿದ್ದಾನೆ. ಈ ಸಂಬಳವು ಭುಕ್ತಿಗೆ ಕೂಡ ಸಾಲದು. ಈ ಸಂಸಾರಸಾಗರವನ್ನು ಈಜಲಾರದೆ ಒಬ್ಬರಲ್ಲಿ ಹೇಳಿಕೊಂಡರೆ ಅವಮಾನವೆಂದು, ಒಬ್ಬೊಂಟಿಗನಾಗಿ ಕುಳಿತು ದುಃಖಾಶ್ರುಗಳನ್ನು ಬಿಡುತ್ತಿರುತ್ತಾನೆ, ಪಾಪ! ಉಮಾಕಾಂತನದು ಪೂರ್ವದಿಂದ ಚೆನ್ನಾಗಿ ಬಾಳಿದ ಸಂಸಾರ, ಆದ್ದರಿಂದ ಎಲ್ಲವೂ ಹಾಗೆಯೇ ನಡೆಯಬೇಕು. ಗಂಡನಾದ ಉಮಾಕಾಂತನ ಕಷ್ಟಗಳನ್ನು ಗ್ರಹಿಸಿ ಸಂಸಾರವನ್ನು ಚೆನ್ನಾಗಿ ನಡೆಸೋಣವೆಂಬ ಬುದ್ಧಿ ಹೊಂದಿದವಳಲ್ಲ ಅನ್ನಪೂರ್ಣೆಯು. ಪ್ರತಿ ವಿಷಯದಲ್ಲಿಯೂ ಮೂರ್ಖತೆಯೊಡನೆ ಹಟವನ್ನು ಹಿಡಿದು ಗಂಡನಿಗೆ ವ್ಯತಿರಿಕ್ತವಾಗಿಯೇ ಪ್ರವರ್ತಿಸುತ್ತಿದ್ದಳು. ಆತನು ಹೆಂಡತಿಗೆ ಎಷ್ಟೋ ಬಗೆಯಲ್ಲಿ ಬೋಧಿಸಿ ಬೇಸತ್ತು ಸುಮ್ಮನಿರುವನು.

ಆ ದರಿದ್ರ ಸಂಸಾರಕ್ಕೆ ಪ್ರತಿವರ್ಷ ಹೆರಿಗೆ ಮಾತ್ರ ತಪ್ಪುವುದಿಲ್ಲ. ಪ್ರತಿ ಹೆರಿಗೆಗೂ ಕನಿಷ್ಟಪಕ್ಷ 15 ರೂಪಾಯಿಗಳು ಖರ್ಚಾಗುತ್ತದೆ. ಹುಟ್ಟಿದ ಮಕ್ಕಳು ಜೀವದಿಂದಿರುವರೆ ಅಂದರೆ ಅದೂ ಸೊನ್ನೆ. 4 ತಿಂಗಳೋ ವರ್ಷವೋ ಬೆಳೆದು ಸಾಯುತ್ತಿದ್ದವು ಆ ಮಕ್ಕಳು, ಅನ್ನಪೂರ್ಣೆಗೆ ಹತ್ತು ಹೆರಿಗೆಗಳಾದವು. ಜೀವದಿಂದಿರುವ ಮಗುವು ಒಂದೂ ಇಲ್ಲ. ಆಕೆಗೆ ಹೆರಿಗೆ ಎಂದರೆ ಬೇಜಾರಿಲ್ಲ. ಮಸಲ 5–6 ತಿಂಗಳ ಆಲಸ್ಯವಾದರೆ ಅಕ್ಕಪಕ್ಕಗಳಲ್ಲಿಯ ಅಮ್ಮ ಅಕ್ಕಂದಿರೊಂದಿಗೆ ಕೇಳಿಕೊಂಡು ವಿಚಾರಪಡುತ್ತಿದ್ದಳು. ಪಾಪ ಮಕ್ಕಳನ್ನು ಬದುಕಿಸಬೇಕೆಂದು ದೇವರನ್ನು ಸದಾ ಬೇಡಿಕೊಳ್ಳುತ್ತಿದ್ದರು ಆ ದಂಪತಿಗಳು, ಮಕ್ಕಳು ಜೀವಿಸುವ ಯೆಂಬ ಆಶೆಯಿಂದ ಸಿಕ್ಕಿದ ಬೈರಾಗಿಗಳಿಂದೆಲ್ಲಾ ಅನ್ನಪೂರ್ಣೆಯು ರಕ್ಷೆಯನ್ನು ಕಟ್ಟಿಸಿಕೊಳ್ಳುತ್ತಿದ್ದಳು. ಆಕೆಯನ್ನು ದರಿದ್ರದೇವತೆಯು ಆವರಿಸಿ, ಕರುಣೆಯನ್ನು ಬಿಟ್ಟು ಬೇರೆ ಯಾವ ಆಭರಣಗಳೂ ಇಲ್ಲದಂತೆ ಮಾಡಿತು. ಆದರೆ ಅನ್ನಪೂರ್ಣೆಯ ಕಂಠವು ಕಾಣಿಸದಂತೆ ರಕ್ಷೆಗಳಿಂದಲೇ ಮುಚ್ಚಿಕೊಂಡಿದ್ದಳು.

ನಾಲ್ಕು ವರ್ಷ ಕಳೆಯಿತು. ಅಂದಿನಿಂದ ಹುಟ್ಟಿದ ನಾಲ್ಕು ಮಕ್ಕಳು ಸುಖದಿಂದಿದ್ದಾರೆ. ಮಕ್ಕಳ ಹಾಲಿನ ಡಬ್ಬಿಗಳಿಗೆ, ತಿಂಡಿಪದಾರ್ಥಗಳಿಗೆ ಮಹಾ ಕಷ್ಟವಾಗಿದೆ. ದಿನಾಗಲೂ ಕಾಫಿ ಕುಡಿಯುವ ಅಭ್ಯಾಸವು ಅನ್ನಪೂರ್ಣೆಗೆ ಜೋರಾಗಿದ್ದಿತು, ಮಕ್ಕಳಿಗೆ ಹಾಲೂ ಬೊಸರೂ ಬೇಕು. ಈ ಕಷ್ಟ ನಿವಾರಣೆಗಾಗಿ ಸಾಲವನ್ನು ಮಾಡಿ ಒಂದು ಎಮ್ಮೆಯನ್ನು ಉಮಾಕಾಂತನು ಕೊಂಡನು. ಅದರಿಂದ ಸಿಗುವ ಆದಾಯದಲ್ಲಿ ಸಾಲವನ್ನು ತೀರಿಸಲೆಳಸಿದ್ದನು. ಎಮ್ಮೆಯು ಬಂದ ದಿನದಿಂದ, ದಿನಕ್ಕೆ ಎರಡು ಬಾರಿ ಕಾಫಿ ಅಭ್ಯಾಸವಾಯಿತು. ಗಂಡನು ದಿನಂಪ್ರತಿ ಬೆಳಿಗ್ಗೆಯೇ ಆಫೀಸಿಗೆ ಹೋಗುತ್ತಿದ್ದನು. ಹೆಂಡತಿಯು ತನಗೆ ಇಷ್ಟಬಂದಂತೆ ಹಾಲನ್ನೆಲ್ಲಾ ಕುಡಿದು ಏನಾದರೂ ಮಿಕ್ಕಲ್ಲಿ ತನ್ನವರಿಗೆ ಕಳುಹಿಸುತ್ತಿದ್ದಳು. ಸಂಸಾರ ವಿಷಯವನ್ನರಿಯದ ಇಂತಹ ಹೆಂಡತಿಯನ್ನು ಕಟ್ಟಿಕೊಂಡು ಸಂಸಾರವನ್ನು ಮಾಡುವುದಕ್ಕಿಂತ ಭಾವಿಯಲ್ಲೋ ಕೆರೆಯಲ್ಲೋ ಬಿದ್ದು ತನ್ನ ದೇಹವನ್ನು ಸಾಕುಮಾಡಿಕೊಂಡಲ್ಲಿ ಲೇಸೆಂದು ಅಂದುಕೊಳ್ಳುತ್ತಿದ್ದನು ಉಮಾಕಾಂತನು. ಎಮ್ಮೆಗಾಗಿ ತಿಂಗಳು ಒಂದಕ್ಕೆ ಹತ್ತು ರೂಪಾಯಿಗಳಂತೆ ಖರ್ಚಾಗುತ್ತಾ ಬಂದಿತು, ಮಕ್ಕಳ ವ್ಯಾಧಿಗಳಿಗಾಗಿ ಬೇರೆ ಖರ್ಚು. ಎಲ್ಲಿ ನೋಡಿದರೂ ಸಾಲ. ಸಾಲ ಕೊಟ್ಟವರ ತಗಾದೆ ಹೆಚ್ಚುತ್ತಾ ಬಂತು. ಮನೆಯಲ್ಲಿ ಸಂಸಾರ ನಡೆಯುವುದೂ ಕಷ್ಟವಾಗುತ್ತ ಒಂದೆತ್ತು. ಬೇರೆ ದಾರಿ ಇಲ್ಲದೇ ಹೋಯಿತು. ಪಾಪ ಉಮಾಕಾಂತನು ಇದ್ದ ಆಸ್ತಿಯನ್ನು ನೋಡಿಸಿ, ಪಾಪರ್ ಚೀಟಿಯನ್ನು ದಾಖಲು ಮಾಡಿದನು

ಇಷ್ಟಾದರೂ ಅನ್ನಪೂರ್ಣೆಯು ಗಂಡನ ಕಷ್ಟವನ್ನು ಗ್ರಹಿಸಲಿಲ್ಲ, ದಿನದಿನಕ್ಕೆ ಉಮಾಕಾಂತನು ಕೃಶಿಸುತ್ತಿದ್ದಾನೆ. ಪಾಪರ್ ಚೀಟಿಯ ವಿಚಾರದಲ್ಲಿಯೂ ಈತನಿಗೆ ವಿರುದ್ಧವಾಗಿಯೇ ತೀರ್ಮಾನವಾಯಿತು. ಸಾಲದ್ದಕ್ಕೆ ಕೆಲಸವೂ ಹೋಯಿತು ಒಂದು ಹೊತ್ತು ಊಟ ಉಮಾಕಾಂತನಿಗೆ. ಅನ್ನಪೂರ್ಣೆಗೆ ಮಾತ್ರ ಮೂರು ಹೊತ್ತು ಸುಖವಾದ ಊಟ.

ಹಾಸಿಗೆಯನ್ನಾಶ್ರಯಿಸಿದನು ಉಮಾಕಾಂತನು. ದಿನದಿನಕ್ಕೆ ವ್ಯಾಧಿಯು ಹೆಚ್ಚುತ್ತಾ ಬಂದಿತು. ಹಾಸಿಗೆಯ ಮೇಲೆ ಮಲಗಿ ಅಶ್ರುಧಾರೆಯನ್ನು ಸುರಿಸುತ್ತಿದ್ದನು. ಈ ಕಷ್ಟದಿಂದ್ದೆವಾರಾಗುವನೆಂಬ ಆನಂದಭಾಷ್ಪಗಳೋ ಅಥವಾ ಈ ಮಕ್ಕಳನ್ನು ಕಟ್ಟಿಕೊಂಡು ಅನ್ನಪೂರ್ಣೆಯು ಹೇಗೆ ಜೀವಿಸುವಳೆಂಬ ದುಃಖಾಶ್ರುಗಳೋ ನಿರ್ಣಯಿಸುವುದು ಕಷ್ಟ.

# ಸಮಾಚಾರ ಸಂಗ್ರಹ

ಕಲಕತ್ತ ಬೀದಿಯಲ್ಲಿ ಒಂದು ಪಕ್ಷದಲ್ಲಿ 1113 ಹೆಣಗಳು ಬೀದಿಯಲ್ಲಿ ಸಿಕ್ಕಿದವು. ಬಂಗಾಳದಲ್ಲಿ 6523 ಧರ್ಮ ಛತ್ರಗಳಲ್ಲಿ ಅನ್ನದಾನ ನಡೆಯುತ್ತಿದೆ.

ಂ ಂ

ಅಂಗಡಿಯವರು ಚಿಲ್ಲರೆ ಕೊಡಬೇಕೆಂದು ನಿಯಮವಿಲ್ಲವೆಂದು ಮಧುರೆ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜೆಡ್ಜರು ಅಪೀಲಿನಲ್ಲಿ ತೀರ್ಪು ಕೊಟ್ಟರು. ಒಬ್ಬನು ಒಂದು ವೀಸೆಸಕ್ಕರೆ ಕೊಳ್ಳಲು ೧ ರೂಪಾಯಿ ಕೊಡಲು ಅಂಗಡಿಯವನು ಚಿಲ್ಲರೆ ಕೊಡಲು ನಿರಾಕರಿಸಿದ್ದಕ್ಕೆ ಅಲ್ಲಿನ ಸಿಟಿಮ್ಯಾಜಿಸ್ಟ್ರೇಟರು 300 ರೂಪಾಯಿ ಜುಲ್ಮಾನೆ ವಿಧಿಸಿದ್ದರು.

ಂ ಂ

ಗೆಣಸು, ಗೋವಿನಜೋಳ ಗೋವಿನ ಜೋಳದಿಂದ ಸಿದ್ಧವಾದ ಪದಾರ್ಥಗಳು, ಭತ್ತ, ಅಕ್ಕಿ ಮತ್ತು ಬೇಳೆಗಳನ್ನು ಬೆಳಗಾಂ ಜಿಲ್ಲೆಯ ಹದ್ದಿನಿಂದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಅಪ್ಪಣೆಯಿಲ್ಲದೆ ಹೊರಗೆ ಎಲ್ಲಿಯೂ ಯಾರೂ ಸಾಗಿಸ ಕೂಡದೆಂದು ಹುಕುಂ ಹೊರಟಿದೆ.

---

ಅಂತ್ಯ ದೆರೆಯು ಬಂದಿತು. ನಿಶ್ವಾಸ ತೀವ್ರಗತಿಯನ್ನು ಹೊಂದುತ್ತಿದೆ. ಕಂದೆತಾಯಿಗಳು ಬಂದರು. ರೋಧನ ಧ್ವನಿಗಳು ಅತಿಕ್ರಮಿಸುತ್ತಲಿವೆ. ನಾಲ್ಕು ಮಕ್ಕಳೊಂದಿಗೆ ಸಮೀಪಿಸಿ ನನಗೆ 'ಏನು ಹೇಳುತ್ತೀರಿ' ಎಂದು ಅನ್ನಪೂರ್ಣೆಯು ಗಂಡನನ್ನು ಕೇಳಿದಳು. ಉಮಾಕಾಂತನು ಕಣ್ಣಿನಿಂದ ನೀರನ್ನು ಸುರಿಸಿದನು. ದೊಡ್ಡ ಮಗನನ್ನು ಹತ್ತಿರಕ್ಕೆ ಕರೆದು, ಮುತ್ತಿಟ್ಟು ಮೈಯೆಲ್ಲಾ ಸವರಿದನು. ಅನ್ನಪೂರ್ಣೆಯು ಪುನಃ ಅದೇ ಪ್ರಶ್ನೆಯನ್ನು ಕೇಳಿದಳು. ಉಮಾಕಾಂತನು ಕಣ್ಣಿನಿಂದ ನೀರು ಸುರಿಸಿದನು.

ಆಗ ಉಮಾಕಾಂತನು "ನನ್ನ ಸಂಸಾರದೆಯೆಲ್ಲಾ ನೀನೇ" ಎಂಬ ಸೂಚನೆಯು ಒರಟಂತೆ ತನ್ನ ಕೈಗಳನ್ನ ಅನ್ನಪೂರ್ಣೆಯು ಕಡೆಗೆ ತೋರಿಸಿ, ಆಮೇಲೆ ಆ ಬಡಮಕ್ಕಳನ್ನೂ ತೋರಿಸಿ, ಪ್ರಾಣಬಿಟ್ಟನು. (ಓಂ)

# ವಿವಿಧ ವಿಷಯ

ಚರ್ಚಿಲ್ ಮಂತ್ರಿಯವರ ತಮ್ಮಂದಿರಾದ ಗ್ಲೋಸೆಸ್ಟರ್ ಡ್ಯೂಕರನ್ನು ಆಸ್ಟ್ರೇಲಿಯಾದ ಗೌರ್ನರ್‌ಜನರಲ್ಲಾಗಿ ನಿಯಮಿಸಲಾಗಿರುವುದು, ಆಸ್ಟ್ರೇಲಿಯಾದ ಕೂಲಿಗಾರ ಪಕ್ಷಣ ಧುರೀಣರಿಗೆ ಅಸಂತುಷ್ಟಿಯುಮ್ನುಂಟುನಾಡಿದೆ.

ಂ ಂ

ಕಾಂಗ್ರೆಸ್ ಸಂಸ್ಥೆಯು ನ್ಯಾಯವಿರುದ್ಧಕೂಟವಲ್ಲವೆಂದು ಪಾಟ್ನಾ ಹೈಕೋರ್ಟಿನವರು ತೀರ್ಮಾನ ಮಾಡಿರುತ್ತಾರೆ.

ಂ ಂ

ಕೆಲವು ಭಾರತೀಯರನ್ನು ಕ್ರಿಮಿನಾರಿಷ್ಟಸ್ಸಿನಲ್ಲಿ ಕೊಂದ ವಿಷಯವು ವಿಚಾರಣೆಯಲ್ಲಿದೆ.

ಂ ಂ

ಯುದ್ಧ ಮುಗಿದನಂತರ ಸ್ವಸಂಚದ ಪುನರ್ರಚನೆ ಮಾಡಲು ಎಲ್ಲಾ ರಾಜ್ಯದವರೂ ದಂಡತೆತ್ತಬೇಕಾಗುವುದು. ಇದಕ್ಕಾಗಿ ಭಾರತ ಸರಕಾರದವರು 35 ಮಿಲಿಯ ಡಾಲರ್ ಅಂದರೆ 12 ಕೋಟಿ ರೂಪಾಯಿ ಕೊಡಬೇಕಾದೀತು. ಅಂದರೆ ದೇಶದ ಉತ್ಪತ್ತಿಯಲ್ಲಿ ಶೇಕಡ 1 ರಂತೆ!

ಂ ಂ

ಕಳೆದ ಶುಕ್ರವಾರ ನವಡೆಲ್ಲಿಯಲ್ಲಿ ಭಾರತದ 11 ಗೌರ್ನರುಗಳೂ, ಲಾರ್ಡ್ ಲೂಯಿಮೌಂಟ್ ಬ್ಯಾಟನ್ ಮುಂತಾದ ಅನೇಕ ಮಹನೀಯರುಗಳೂ ವೈಸರಾಯರು ಕೊಟ್ಟ ಔತಣದಲ್ಲಿ ಭಾಗಿಯಾಗಿದ್ದರು. ನಂತರ ವೈಸರಾಯರು ಈ 11 ಗೌರ್ನರರ ಸಂಗಡ ಭಾರತದ ಆಹಾರ ವಿಷಯವಾಗಿ ಮಾತನಾಡಿದರು.

ಂ ಂ

ಭಾರತಕ್ಕೆ ಅಕ್ಟೋಬರ್‌ನಿಂದ ಈವರೆಗೆ 40 ಸಾವಿರ ಟನ್ ಗೋಧಿ ಅಮದಾಗಿದೆ. ಇದರಲ್ಲಿ 35 ಸಾವಿರ ಟನ್ ಬಂಗಾಳಾಕ್ಕೆ ಕಳುಹಿಸಲಾಗಿದೆ.

ಂ ಂ

ಶಿವಮೊಗ್ಗಾ ಜಿಲ್ಲಾಧಿಕಾರಿಯ ಅಪೇಕ್ಷೆನೀರೆ ಹಿಂದೂ ಮಹಾಸಭೆಯು ಶಿವಮೊಗ್ಗೆಯಲ್ಲಿ ಈಗ ನಡೆಯದೆ ಜನವರಿಯಲ್ಲಿ ಜರುಗುವುದು.

## .... ರೇಷನಿಂಗ್ ವಿಧಾನದ ಹತ್ತು ಅಂಶಗಳು ....

ನಮ್ಮ ಸರ್ಕಾರದವರು ಇನ್ನು ಮುಂದೆ ಸಂಸ್ಥಾನದ ಅನೇಕ ದೊಡ್ಡ ಊರುಗಳಲ್ಲಿ ಆಹಾರ ಪದಾರ್ಥಗಳನ್ನು ರೇಷನಿಂಗ್ ವಿಧಾನದ ಮೂಲಕ ಹಂಚಲು ನಿರ್ಧರಿಸಿದ್ದಾರಷ್ಟೆ. ಯಾವುದಾದರೂ ಊರಿಗೆ ರೇಷನಿಂಗ್ ವಿಧಾನವು ಬರುತ್ತದೆಯೆಂದರೆ ಆಲ್ಲಿನ ಜನರ ಮನಸ್ಸಿನಲ್ಲಿ ನಾನಾ ವಿಧವಾದ ಇಲ್ಲದ ಸಲ್ಲದ ಊಹಾಪೋಹಗಳು ಉಂಟಾಗುತ್ತವೆ. ಈ ವಿಧಾನದ ಉದ್ದೇಶಗಳಾವುವು? ಅದರಿಂದ ಪ್ರಯೋಜನಗಳು ಯಾವುವು? ಮುಂತಾದ ವಿಷಯಗಳನ್ನು ಸ್ವಲ್ಪವಾದರೂ ತಿಳಿಯದ ಜನರು ದಸ್ಪಗಂಟಲುಗಳಲ್ಲಿ ತಮ್ಮ ಮನಸ್ಸಿಗೆ ಬಂದಂತೆ ಏನೇನೋ ಹೇಳಿ ಇತರರ ಮನಸ್ಸನ್ನೂ ಕದಡಿ ಅಂದೋಳನವನ್ನುಂಟುಮಾಡುತ್ತಾರೆ. ಆದುದರಿಂದ ರೇಷನಿಂಗ್ ವಿಧಾನದ ಒಗ್ಗೆ ಕೆಲವು ಅಂಶಗಳನ್ನು ತಿಳಿಸಬೇಕಾದುದು ಆವಶ್ಯಕವಾಗಿದೆ. ಇಂಡಿಯಾ ಸರಕಾರದವರು ಪ್ರಾಂತೀಯ ಸರಕಾರಗಳಿಗೆ ರೇಷನಿಂಗ್ ವಿಧಾನಕ್ಕೆ ಸಂಬಂಧಪಟ್ಟ ಹತ್ತು ಅಂಶಗಳನ್ನು ತಿಳಿಯಪಡಿಸಿದ್ದಾರೆ. ಆ ಹತ್ತು ಅಂಶಗಳು ನಮ್ಮ ಸಂಸ್ಥಾನಕ್ಕೂ ಅನ್ವಯಿಸುತ್ತವೆ.

೧. ಮೊಟ್ಟ ಮೊದಲನೆಯದಾಗಿ ಆಹಾರ ಪದಾರ್ಥಗಳ ರೇಷನಿಂಗ್ ವಿಧಾನವನ್ನು ಜಾರಿಗೆ ತರುವುದರ ಉದ್ದೇಶವು ಜನರ ತಿನ್ನುಪಕೆಯನ್ನು ಕಡಿಮೆ ಮಾಡಬೇಕೆಂಬುದಲ್ಲ. ಸದ್ಯದಲ್ಲಿ ಕಡಿಮೆಯಾಗಿರಕ್ಕ ಆಹಾರ ಪದಾರ್ಥಗಳನ್ನು ಎಲ್ಲರಿಗೂ ದೊರಕುವಂತೆ ಹಂಚಬೇಕೆಂಬುದೇ ಆಗಿದೆ.

ಆದರಲ್ಲಿಯೂ ಆಹಾರ ಪದಾರ್ಥಗಳು ಕಡಿಮೆಯಾಗಿದ್ದೂ, ಅವುಗಳ ಸರಪರಾಜುಗಳೂ ಅಕ್ರಮವಾಗಿದ್ದರೆ ಅಂತಹ ಸಂದರ್ಭದಲ್ಲಿ ಸಮಸ್ತರಿಗೂ ಆಹಾರ ಪದಾರ್ಥಗಳನ್ನು ಜೆಚ್ಚು ಕಡಿಮೆಯಿಲ್ಲದಂತೆ ಹಂಚಬೇಕೆಂದರೆ ಆ ಪದಾರ್ಥಗಳ ಮೇಲೆ ಒಲವಾದ ಹತೋಟಿಯನ್ನಿಟ್ಟು ರೇಷನಿಂಗ್ ವಿಧಾನವನ್ನು ಜಾರಿಗೆ ತರಬೇಕಾದುದು ಅತ್ಯಗತ್ಯವೇ ಆಗುತ್ತದೆ.

೨. ರೇಷನಿಂಗ್ ವಿಧಾನವನ್ನು ತರಲು ಪದಾರ್ಥಗಳ ಧಾರಣೆವಾಸಿಗಳ ಮೇಲೆ ಹತೋಟಿಯನ್ನಿಟ್ಟುಕೊಳ್ಳಬೇಕಾಗುತ್ತದೆ. ರೇಷನಿಂಗ್ ವಿಧಾನವು ದೇಶವಾದ್ಯಂತವೂ ಜಾರಿಗೆ ಒಂದಿದ್ದರೂ ಸಹ, ಪ್ರತಿಯೊಬ್ಬರಿಗೂ ಒಂದೇ ಪ್ರಮಾಣದಲ್ಲಿ ಎಲ್ಲಿಪೇರಗಳಿಲ್ಲದಂತೆ ಆ ಪದಾರ್ಥಗಳು ಹಂಚಿಕೆಯಾಗಬೇಕಾದರೆ, ದೇಶದಲ್ಲಿನ ಪ್ರತಿಯೊಬ್ಬನೂ ತನ್ನ ರೇಷ್ ವಸ್ತುಗಳನ್ನು ಕೊಂಡುಕೊಳ್ಳಲು ಅನುಕೂಲವಾಗುವಂತೆ ಧಾರಣೆವಾಸಿಗಳು ಕಡಿಮೆಯಾಗಿರಬೇಕು. ಆದುದರಿಂದ ಧಾರಣೆಗಳ ಹತೋಟಿಯು ಅವಶ್ಯಕವಾಗುವುದು. ಇಲ್ಲವಾದರೆ ಶ್ರೀಮಂತರು ತಮ್ಮ ರೇಷ್ ಕೋಟಾವನ್ನು ಕೊಂಡುಕೊಳ್ಳುವರು: ಬಡವರು ತಿಪ್ಪರಿಗೆಯೇ ಕಾಗುವುದು! ಇಂತಹ ಪರಿಸ್ಥಿತಿಯುಂಟಾಗದಿರಲೆಂದೇ ಧಾರಣೆವಾಸಿಗಳ ಹತೋಟಿಯನ್ನು ಸರಕಾರದವರು ಇಟ್ಟುಕೊಳ್ಳುವುದು.

೩. ಆಹಾರ ಪದಾರ್ಥಗಳ ರೇಷನಿಂಗ್ ವಿಧಾನಗಳ ತತ್ವದಲ್ಲಿಯೂ, ಕಾರ್ಯರೂಪದಲ್ಲಿಯೂ ಒಂದೇ ಸಮನಾಗಿರಬೇಕು. ಏರುಪೇರುಗಳಿರಲೇಕೂಡದು. ನಿಪುಣರು ಗೊತ್ತುವಳಿ ಮಾಡಿ, ಮೇಲ್ವಿಚಾರಣೆ ನಡೆಸುತ್ತಿರುವ ರೇಷನಿಂಗ್ ವಿಧಾನವನ್ನು ದೇಶದ ಅದ್ಯಂತವೂ ಜಾರಿಗೆ ತಂದಲ್ಲಿ ಅದು ಫಲಪ್ರದವಾಗಿ ನಡೆದು ನಡೆದು ಪದಾರ್ಥಗಳು ಪೋಲಾಗುವುದು ತಪ್ಪುತ್ತದೆ.

೪. ಆಹಾರ ಪದಾರ್ಥಗಳ ರೇಷನಿಂಗ್ ವಿಧಾನವು ಸಮಗ್ರವಾಗಿರಬೇಕು. ಮುಂದೆ ಈ ವಿಧಾನವನ್ನು ಎಷ್ಟು ದೂರ ವಿಸ್ತರಿಸಬೇಕಾಗಬಹುದೆಂಬುದನ್ನು ಮುಂದಾಗಿಯೇ ಆಲೋಚಿಸಿ ನಿರ್ಧರಿಸಿಕೊಂಡು, ಅದಕ್ಕೆ ತಕ್ಕಂತೆ ಕೆಲಸಕಾರ್ಯಗಳನ್ನು ಗೊತ್ತುಪಡಿಸಬೇಕು.

ವಿಷಯಗಳನ್ನೆಲ್ಲಾ ಪರಿಶೀಲಿಸಿಯೇ ನಮ್ಮ ಸರಕಾರದವರು ಈ ಇಲಾಖೆಯಲ್ಲಿ ಕೆಲಸಮಾಡುವವರಿಗೆ ಆಗಿಂದಾಗ್ಗೆ ಹೀಗೆಹೀಗೆಯೇ ಕೆಲಸಮಾಡಬೇಕೆಂದು ಸಲಹೆಗಳನ್ನು ಕೊಟ್ಟು, ರೇಷನಿಂಗ್ ಸಂಬಂಧಪಟ್ಟ ನಮೂನೆ ಫಾರಂಗಳನ್ನೂ ರೇಷ್ ಕಾರ್ಡುಗಳನ್ನೂ ಶಯಾರ್ಮಾಡಿರುತ್ತಾರೆ.

ಈಗ ದೇಶದಲ್ಲಿ ಎಷ್ಟೋ ವಸ್ತುಗಳು ಕಡಿಮೆ ಬದ್ದಿರುವುದರಿಂದ ಅವುಗಳಿಗೆಲ್ಲಾ ರೇಷನಿಂಗ್ ವಿಧಾನವು ಜಾರಿಗೆ ಬಂದಿದೆ. ಆದರೆ ಆ ವಸ್ತುಗಳ ರೇಷನಿಂಗಿಗೂ, ಆಹಾರ ಪದಾರ್ಥಗಳ ರೇಷನಿಂಗ್ ವ್ಯವಸ್ಥೆಗೂ ಸ್ವಲ್ಪವೂ ಸಂಬಂಧವಿಲ್ಲ.

೫. ಆಹಾರಪದಾರ್ಥಗಳ ಮೇಲೆ ಹತೋಟಿಯನ್ನಿಟ್ಟುಕೊಳ್ಳಬೇಕಾದರೆ ಕಾನೂನುಗಳಾಗಬೇಕು. ಸರಕಾರದವರು ರೇಷನಿಂಗ್ ವಿಧಾನವನ್ನು ಜಾರಿಗೆ ತರಬೇಕಾದರೆ, ಪ್ರಜೆಗಳ ಸಂಖ್ಯೆಯನ್ನು ಎಣಿಕೆ ಮಾಡಲು, ರಿಜಿಸ್ಟ್ರೇಷ್ ಮಾಡಲು, ಹಂಚಲು, ಅವರಿಗೆ ಅಧಿಕಾರಿಗಳು ಇರಬೇಕು. ಅವರು ಈ ಈ ಅಧಿಕಾರಗಳನ್ನು ಬಹಳ ಖಡಾಖಂಡಿತವಾಗಿ ಪ್ರಯೋಗಿಸಬೇಕು. ಆದುದರಿಂದ ಈ ಕೆಲಸಕ್ಕಾಗಿ ಪ್ರತ್ಯೇಕವಾದ ಅಧಿಕಾರಿಗಳನ್ನೇ ನೇಮಿಸಬೇಕಾಗುತ್ತದೆ.

ಈಗ ಬ್ರಿಟಿಷ್ ದೇಶದಲ್ಲಿ ಜಾರಿಯಲ್ಲಿರುವ ರೇಷನಿಂಗ್ ಪದ್ಧತಿಯು ಅತ್ಯಮೋಘ ರೀತಿಯಲ್ಲಿ ಜಯಪ್ರದವಾಗಿದೆ ಎಂಬುದು ಎಲ್ಲರಿಗೂ ತಿಳಿದಿದೆಯಷ್ಟೆ. ಅಲ್ಲಿನ ಸರಕಾರದವರು, ರೇಷನಿಂಗ್ ನಿಯಮಗಳನ್ನು ಸರ್ವತೂ ಅನುಸರಿಸುವಂತೆ ಮಾಡಲು ಬಹಳ ಬಲವಾದ ಅಧಿಕಾರ ವರ್ಗವನ್ನು ನೇಮಕ ಮಾಡಿದ್ದಾರೆ. ಲಂಡನ್ ನಗರ ಒಂದರಲ್ಲೇ ಆಹಾರ ಪದಾರ್ಥಗಳಿಗೆ ಸಂಬಂಧಪಟ್ಟ ತಕ್ಸೀರುಗಳು ಸರಾಸರಿ ತಿಂಗಳಿಗೆ 600 ರಂತೆ ಕೋರ್ಟಿಗೆ ಒಂದು ತಕ್ಸೀರು ಮಾಡಿದವರಿಗೆ ಭಾರಿ ಶಿಕ್ಷೆಗಳನ್ನೂ ಭಾರಿ ಜುಲ್ಮಾನೆಗಳನ್ನೂ ಕಠಿಣ ಸಜಾಗಳನ್ನೂ ವಿಧಿಸುತ್ತಿದ್ದಾರೆ. ಒಂದು ಬಾರಿ ಒಬ್ಬ ತಕ್ಸೀರುದಾರನಿಗೆ ವಿಧಿಸಲ್ಪಟ್ಟ ಒಂದೇ ಒಂದು ಜುಲ್ಮಾನೆಯು ಮೂರೂವರೆ ಲಕ್ಷ ರೂಪಾಯಿಗಳು!

೬. ರೇಷನಿಂಗ್ ಜಾರಿಗೆ ಬರುವ ಪ್ರತಿಯೊಂದು ಊರಿನಲ್ಲಿಯೂ ಸ್ಥಳೀಯ ಆಹಾರ ಸಲಹಾ ಸಮಿತಿಗಳನ್ನೂ, ಆಹಾರ ಪದಾರ್ಥ ಹತೋಟಿ ಸಮಿತಿಗಳನ್ನೂ ರಚಿಸಬೇಕು. ಆ ಸಮಿತಿಗಳಲ್ಲಿ ವ್ಯಾಪಾರಿಗಳ, ಪದಾರ್ಥವನ್ನು ಸ್ಥಳಿದಿಂದ ಸ್ಥಳಕ್ಕೆ ಸಾಗಿಸುವವರ, ಹೆಂಚತಕ್ಕವರ, ಹೋಟಲುಗಳವರ, ಪ್ರಜಾಹಿತ ಚಿಂತಕರ ಪ್ರತಿನಿಧಿಗಳಿರಬೇಕು.

೭. ಆಹಾರ ಪದಾರ್ಥಗಳ ರೇಷನಿಂಗ್ ವಿಧಾನವನ್ನು ನೋಡಿಕೊಳ್ಳುವುದಕ್ಕೆ ನೇಮಿಸಲ್ಪಡುವ ಅಧಿಕಾರಿಗಳು ಅತ್ಯಂತ ದಕ್ಷರಾಗಿರಬೇಕು. ಅಪರಿಗೆ ಅಧಿಕಾರ ನಡೆಸತಕ್ಕ ಜಾಣ್ಮೆಯಿರಬೇಕು, ನಂಬಿಕೆಗೆ ಅರ್ಹರಾಗಿರಬೇಕು. ಈ ಗುಣಗಳಿಲ್ಲದವನ್ನು ಈ ಕೆಲಸಕ್ಕೆ ನೇಮಿಸಬಾರದು.

೮. ಪ್ರಜೆಗಳ ಆಹಾರ ಸಮಸ್ಯೆಗೆ ಸಂಬಂಧಪಟ್ಟ ವಿಷಯಗಳಲ್ಲಿ ಆಡಳಿತ ವರ್ಗವು ಅತ್ಯಂತ ಜಾರುಕಾಗಿ, ಅಂದರೆ ಕಾಲವಿಳಂಬಗ ಅವಕಾಶ ಕೊಡದೆ ವಿದ್ಯುದ್ವೇಗದಲಿ ಕೆಲಸ ಮಾಡಬೇಕು, ಇದರ ಊಹಾಶಕ್ತಿಯು ತೀವ್ರವಾಗಿರಬೇಕು. ಮೇಲ್ವಿಚಾರಣಾ ಕ್ರಮವೂ ಹತೋಟಿ ವಿಧಾನವೂ ಲೋಪರಹಿತವಾಗಿ ಸಮಗ್ರವಾಗಿರಬೇಕು.

ಆಹಾರವಸ್ತುಗಳ ಸರಬರಾಜಿಗೂ, ಹಂಚಿಕೆಗೂ. ಸೆಸೆರುಗೊಂಡ ಟೋಕು ವ್ಯಾಪಾರಿಗಳನ್ನೂ ಚಿಲ್ಲರೆಅಂಗಡಿ ವರ್ತಕತನ್ನೂ ಉಗಯೋಗಿಸಿಕೊಳ್ಳಬೇಕು. ಇವರ ಜತೆಗೆ ಸರ್ಕಾರದವರೇ ಏರ್ಪಡಿಸಿರುವ ಗ್ರೈಕ್ ಡಿವೋಗಳು ಸಹ ಪದಾರ್ಥಗಳ ಹಂಚಿಕೆಯನ್ನು ಮಾಡಬೇಕು.

೯. ಮುಖ್ಯವಾದ ಆಹಾರ ಪದಾರ್ಥಗಳನ್ನು ಸರ್ಕಾರದವರು ದಾಸ್ತಾನು ಮಾಡಿಕೊಂಡಿದ್ದು, ಅವುಗಳನ್ನು ಲೋಪಬಾರದಂತೆ ಕ್ರಮವಾಗಿ ಅಂಗಡಿಗಳಿಗೆ ಕೊಟ್ಟು ಪ್ರಜೆಗಳಿಗೆ ದೊರಕುಮಾಡಬೇಕು.

೧೦. ವೃತ್ತ ಪತ್ರಿಕೆಗಳ ಸಹಾಯವನ್ನೂ, ಬೆಂಬಲವನ್ನೂ ಪಡೆಯಬೇಕು. ಆಹಾರ ವಸ್ತುಗಳ ರೇಷನಿಂಗ್ ವಿಧಾನವು ಯಶಸ್ವಿಯಾಗಲು ಪತ್ರಿಕೆಗಳ ನೆರವು ಬಹಳ ಸಹಾಕಾರುವಾಗಿರುತ್ತದೆ. (ರಾ. ರ.)

---

ಸರಕಾರದ ಪಬ್ಲಿಸಿಟಿ ಆಫೀಸರು ಹೊರಡಿಸಿರುವ ಒಂದು ನೋಟಫಿಕೇಷನ್ ಪ್ರಕಾರ ಈ ವಿಷಯ ಹೊರಪಟ್ಟಿದೆ— ಶ್ರೀ ಜಯಚಾಮರಾಜೇಂದ್ರ ಆಕ್ಯುಪೇಷನಲ್ ಇನ್‌ಸ್ಟಿಟ್ಯೂಟಿನಲ್ಲಿ ವಿದ್ಯಾಭ್ಯಾಸ ಮಾಡಲು ವಿದ್ಯಾರ್ಥಿಗಳಿಗಾಗಿ ಜಾಹಿರಾತು ಕೊಟ್ಟಿವು. ಹಿಂದುಳಿದವರು ಅತ್ಯಲ್ಪ ಮಂದಿ ಅರ್ಜಿಹಾಕಿದರು. ಇವರಲ್ಲಿ ಬಹು ಕಡಮೆ ಮಂದಿ ಭೇಟಿಗೆ ಬಂದರು. ಭೇಟಿಯಲ್ಲಿ ಚೆನ್ನಾಯಿತರಾದವರಲ್ಲಿ ಅನೇಕರು ವ್ಯಾಸಂಗಮಾಡಲು ಬರಲೇ ಇಲ್ಲ. ಹೀಗಾಗಿ ಚೆನ್ನಾಯಿತರಾದ 168 ಮಂದಿಯರಲ್ಲಿ ಹಿಂದುಳಿದವರು 26 ಮಂದಿ ಮಾತ್ರ!

ಈ ವಾಕ್ಯಶಾಲೆಯ ವಿಷಯದಲ್ಲಿ ಮೊನ್ನೆ ನಡೆದ ಪ್ರಜಾಪ್ರತಿನಿಧಿಸಭೆಯಲ್ಲಿ ದೀರ್ಘ ಚರ್ಚೆ ನಡೆದಿತ್ತು.

## ಮೈಸೂರು ವೈಶ್ಯಪತ್ರಿಕೆ

ಉತ್ತಮ ಸಚಿತ್ರ ಕನ್ನಡ-ತೆಲಗು

ಮಾಸಪತ್ರಿಕೆಗೆ

ಚಂದಾದಾರರಾಗಿರಿ

ಈಗಿನ ವಾರ್ಷಿಕ ಚಂದಾ ರೂ. 3-0-0

ಬಿಡಿ ಪ್ರತಿ 4 ಆಣೆ.

ಹಿಗ್ಗಿಬಾಥಮ್ಸ್ ಲೈಬ್ರರಿ ಬುಕ್‌ಸ್ಟಾಲ್

ನಲ್ಲಿಯೂ ಪತ್ರಿಕೆಯು ದೊರೆಯುತ್ತೆ.

ಕಾರ್ಯಾಲಯ ;

ಶ್ರೀ ವಾಸವಾಂಬ ಭವನ

ಅಶೋಕ ರಸ್ತೆ, ಮೈಸೂರು



## ಸತ್ಯವಾದಿ ವಾರದಸಂಚಿಕೆ

ಪ್ರತಿ ಸೋಮವಾರ

ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ ವಾರ್ಷಿಕ ಚಂದಾ ರೂ. 1-12-0. ಮನಿಯಾರ್ಡರ್ ಮಾಡಬೇಕು. ವಿ. ಪಿ. ಇಲ್ಲ.



## ವಿಶ್ವಭಾರತಿ

ವ

ದಸರಾ ಸಂಚಿಕೆ

— ಬೆಲೆ 2½ ಆಣೆ



ಈ "ಓಂ" ಗುರ್ತಿನ ಕೇಸರಿಯು ಅತ್ಯಂತ ಪರಿಶುದ್ಧವಾದುದು. ಇದರಲ್ಲಿ ಯಾವ ಆಕ್ಷೇಪಕರವಾದ ಪದಾರ್ಥವೂ ಸೇರಿಲ್ಲ. ಮತ್ತು ಶಾಸ್ತ್ರೀಯವಾಗಿ ಪರಿಶುದ್ಧವಾದುದು. ದೇವ ಸ್ಥಾನಗಳಲ್ಲಿಯೂ ದೇವರ ಪೂಜೆಗೂ ಔಷಧಿಕೆಳಿಗೂ, ತಿಂಡಿ ಪದಾರ್ಥಗಳಿಗೂ ಸುಖಸಂತೋಷ ಕಾಲದಲ್ಲೂ ಉಪಯೋಗಿಸಿಲ್ಲಡಲು ಅರ್ಹವಾಗಿದ.

ಅತ್ಯಂತ ಪರಿಶುದ್ಧವಾದುದೆಂದು ಗ್ಯಾರಂಟಿ ಪೊಂದಿಕೆ

'ಓಂ' ಬ್ರಾಂಡ್ ಕೇಸರಿ'

## ವಲ್ಲಭದಾಸ್ ತೇಜಪಾಲ್

೧೪ ಗೋವಿಂದಪ್ಪನಾಯಕ್ ಸ್ಟ್ರೀಟ್, ಜಿ. ಟಿ. ಮದರಾಸು



ದೇಶಾಭಿಮಾನ. ಸ್ವಾಭಿಮಾನ

ಇವುಗಳೆರಡರ ದೃಷ್ಟಿಯಿಂದಲೂ ಮೈಸೂರಿನವರಿಗೆ ಜೀವವಿಮೆ ಮಾಡಲು

## ಮೈಸೂರು ಸರ್ಕಾರದ ಜೀವವಿಮೆ ಇಲಾಖೆಯ

ಪ್ರಜೆಗಳ ಶಾಖೆಯೇ ಅತ್ಯುತ್ತಮ ಸಂಸ್ಥೆ!

ವಿಮೆಯ ಮೊಬಲಗಿಗೆ ಸರ್ಕಾರದ ಹುಟ್ಟುವಳಿಯೇ ಆಧಾರ

ವಿಮೆಯ ಹಣವನ್ನು ಸ್ವಲ್ಪವೂ ಸಾವಕಾಶವಿಲ್ಲದೆ ಪಾವತಿಮಾಡಲಾಗುವದು

ವಿಮೆದಾರರಿಗೆ ಆಡಳಿತ ಸಮಯದಲ್ಲಿ ಪ್ರಾತಿನಿಧ್ಯವುಂಟು

ಸಾವಿರಕ್ಕೆ ಸಾಲಿಯಾನಾ ಇಪ್ಪತ್ತು ರೂ. ಗಳಂತೆ ಬೋನಸ್ ಹಂಚಿದೆ

ಹೆಚ್ಚು ವಿವರಗಳಿಗೆ ದಯವಿಟ್ಟು ಬರೆಯಿರಿ—

ಸೆಕ್ರೆಟರಿ,

ಮೈಸೂರು ಸರ್ಕಾರದ ಜೀವವಿಮೆ ಇಲಾಖೆ

ಬೆಂಗಳೂರು.



## Opera Talkies -- KrishnaPrema

ಆಪೇರಾ ಟಾಕೀಸ್ 4 ನೇ ಯಶಸ್ವಿ ವಾರ

ಭಾನುಮತಿ, ಸೂರ್ಯಕುಮಾರಿ, ಶಾಂತಿಕುಮಾರಿ, ಅದ್ವಂಕಿ ಮತ್ತು ಮೈಸೂರಿನ ಹಿರಣ್ಣಯ್ಯ ಪಾತ್ರವಹಿಸಿರುವ

## ಕೃಷ್ಣಪ್ರೇಮ

(ತೆಲಗು ಭಾಷೆಯಲ್ಲಿ)



2 ನೇ ಅಮೋಘ ವಾರ

ರಣಜಿತ್ ಟಾಕೀಸ್

## Ranjit = Guest

ಮಾಧುರಿ, ಈಶ್ವರಲಾಲ್,

ಷಣ್ಮುಖಿ, ರಾಮಶುಕ್ಲ

ಮುಂತಾದವರು ಪಾತ್ರವಹಿಸಿರುವ

.... ಗೆಸ್ಟ್ ....

ಅಥವಾ

## ಮೆಹಮಾನ್

ಅಮೋಘ ಕಲಾಕೃತಿ (ಹಿಂದಿ)

ಶ್ರೀಪರಶುರಾಂ ಹಾಲ್

— ಪ್ರೊಪ್ರೈಟರ್ಸ್ —

ಧೋಂಡೋಜಿರಾವ್ ಆಂಡ್ ಸನ್ಸ್

ಸಯ್ಯಾಜಿರಾವ್ ರೋಡ್, ಮೈಸೂರು,

ನಮ್ಮಲ್ಲಿ ಎಲ್ಲಾ ವಿಧವಾದ ಬಟ್ಟೆಗಳೂ ಸರಿಯಾದ ಬೆಲೆಗೆ ದೊರಯುತ್ತವೆ.

ಹೊಲಿಗೆ ಕೆಲಸಗಳನ್ನು ಸಲದಲ್ಲಿ ಸುಲಭ ದರದಲ್ಲಿ ಮಾಡಿಕೊಡುತ್ತೇವೆ.



## Laksbminarasimha Press

Artistic & Colour Printing a Speciality

Srirampet, Mysore



ಅಕ್ಕರ ಸಾಮಾಜಿಕ

ಭಾವಪರಿಪೂರ್ಣವಾದ ಕಥೆ

ಓದಲು ಸ್ವಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು



## ——ಶಕ್ತಿಸುಧಾ

ದೇಹದೌರ್ಬಲ್ಯ ಬಲಹೀನತೆ ಇವಗಳನ್ನು ಹೋಗಲಾಡಿಸಿ ವೀರ್ಯಾಭಿವೃದ್ಧಿ ಮಾಡಿ ದೇಹಕ್ಕೆ ಕಾಂತಿಯನ್ನು ಉಂಟುಮಾಡುತ್ತೆ

ಉಪಯೋಗಿಸಿ ಕೊಂಡು ಉಪಯೋಗಿಸಿರಿ!

ಬೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ.

೧೦೬೭, ಚಾಮರಾಜಪುರಂ ಮೈಸೂರು.


Edited, Printed & published by M. S. Krishna Rao, at the Satyavadi Press. Chamaraja Agrahar, Mysore.